ಇ) ಹಾಗಿದ್ದಲ್ಲಿ, ಇರುವ ಐ ಟಿ ಐ ಸಂಸ್ಥೆಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಬಿಡುಗಡೆ ಮಾಡಿದ ಹಣವೆಷ್ಟು?

ಈ) ರಾಜ್ಯದಲ್ಲಿ ಹೊಸ ಐ ಟಿ ಐ ಶಿಕ್ಷಣ ಸಂಸ್ಥೆಗಳನ್ನು ಮಂಜೂರು ಮಾಡಲಾಗಿರುವ ಜಿಲ್ಲೆಗಳಾವುವು ಹಾಗೂ ಎಷ್ಟು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತ ಕಲ್ಯಾಣ ಸಚಿವರು)

ಅ) ರೂ 102 79 ಲಕ್ಷಗಳು

ಆ) 11

ಇ) ರೂ 420 ಲಕ್ಷಗಳು

ಈ) 1) ಆಲೂರು ಸಿದ್ದಾಪುರ, ಕೊಡಗು ಜಿಲ್ಲೆ
2) ಕೆ ಆರ್ ಪೇಟೆ, ಮಂಡ್ಯ ಜಿಲ್ಲೆ
3) ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
4) ಪಡುವಲ ಹಿಪ್ಪ, ಹೊಳೇನರಸೀಪುರ, ಹಾಸನ ಜಿಲ್ಲೆ
5) ಮುಂಡಗೋಡು, ಉತ್ತರ ಕನ್ನಡ ಜಿಲ್ಲೆ
6) ಗಂಗಾವತಿ, ಕೊಪ್ಪಳ ಜಿಲ್ಲೆ
7) ಶಿಕಾರಿಪುರ, ಶಿವಮೊಗ್ಗ ಜಿಲ್ಲೆ

568(1066) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಒದಗಿಸಲಾದ ಹಣದಲ್ಲಿ ಇನ್ನೂ ಹೆಚ್ಚಿನ ಭಾಗ ಬಳಕೆಯಾಗದೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ಬಳಕೆಯಾಗದೆ ಉಳಿದ ಹಣದ ಮಾಹಿತಿ ಒದಗಿಸುವುದು)?

2) ಹಾಗಿದ್ದಲ್ಲಿ ಈ ಬಗ್ಗೆ ನಿರ್ಲಕ್ಷ ತೋರಿಸುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

1) ಅಭಿವೃದ್ಧಿಗಾಗಿ ಬಿಡುಗಡೆ ಮಾಡಿದ ಹಾಗೂ ಖರ್ಚಾದ ಹಣದ ವಿವರಗಳು ಕೆಳಕಂಡಂತಿವೆ

ಸಮಾಜ ಕಲ್ಯಾಣ ಇಲಾಖೆ

2006–07ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ಪರಿಶಿಷ್ಟ ಜಾತಿ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ನಿಗದಿಯಾದ ಅನುದಾನ ಮತ್ತು ಡಿಸೆಂಬರ್–2006ರವರೆಗೆ ಬಿಡುಗಡೆಯಾದ ಹಣ, ವೆಚ್ಚವಾದ ಹಣ, ಬಿಡುಗಡೆಗೆ ಶೇಕಡಾವಾರು ಸಾಧನೆ ಈ ಕೆಳಕಂಡಂತಿರುತ್ತದೆ (ರೂ ಲಕ್ಷಗಳಲ್ಲಿ)

ಕ್ರ ಸಂ	ವಿವರ	ಅನುದಾನ	ಬಿಡುಗಡೆ	ವೆಚ್ಚ	ಬಿಡುಗಡೆಗೆ ಶೇ ಸಾಧನೆ
1	ಯೋಜನೆ	33477 14	19140 92	14098 94	73 66
2	ಯೋಜನೇತರ	15733 39	11466 43	10569 53	92 18
	ಒಟ್ಟು	**49210 53**	**30607 35**	**24668 47**	**80.59**

ಯೋಜನೆ ಮತ್ತು ಯೋಜನೇತರಡಿಯಲ್ಲಿ ಸ್ವಲ್ಪ ಉಳಿಕೆಯಾಗಿದ್ದು ಅದನ್ನು ಮಾರ್ಚ್ 2007ರ ಅಂತ್ಯದೊಳಗಾಗಿ ಖರ್ಚು ಮಾಡಲಾಗುವುದು

ವಿಶೇಷ ಕೇಂದ್ರೀಯ ಸಹಾಯಧನದಡಿ ರೂ 11 05 ಕೋಟಿ ಬಿಡುಗಡೆಯಾಗಿದ್ದು ಅದರಲ್ಲಿ ರೂ 9 50 ಕೋಟಿ ಖರ್ಚಾಗಿದೆ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಒದಗಿಸಲಾದ ಅನುದಾನವನ್ನು ಸಂಪೂರ್ಣವಾಗಿ ವಿನಿಯೋಗಿಸಲಾಗಿದೆ

ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಅಭಿವೃದ್ಧಿಗಾಗಿ ನಿಗಮಕ್ಕೆ ಬಿಡುಗಡೆಯಾದ ಹಣದಲ್ಲಿ ಬಳಕೆಯಾಗದೆ ಯಾವುದೇ ಹಣ ಉಳಿದಿರುವುದಿಲ್ಲ

2) **ಸಮಾಜ ಕಲ್ಯಾಣ ಇಲಾಖೆ**

ಜಿಲ್ಲಾ ಪಂಚಾಯತ್ ಮತ್ತು ರಾಜ್ಯವಲಯದಡಿ ಹಣ ಖರ್ಚು ಮಾಡುವುದಿದ್ದು ಮಾರ್ಚ್ 2007ರ ಅಂತ್ಯದೊಳಗಾಗಿ ಪೂರ್ಣ ಹಣವನ್ನು ಖರ್ಚು ಮಾಡಲು ಕ್ರಮ ಕೈಗೊಳ್ಳಲಾಗಿದೆ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಅನ್ವಯಿಸುವುದಿಲ್ಲ

ಡಾ ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

ಅನ್ವಯಿಸುವುದಿಲ್ಲ

569(1067) ಶ್ರೀ ಅಂಜನಾಮೂರ್ತಿ (ನೆಲಮಂಗಲ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆಲಮಂಗಲ ಪಟ್ಟಣದ ಮೂಲಕ ರಾಷ್ಟ್ರೀಯ ಹೆದ್ದಾರಿ–4, ರಾಷ್ಟ್ರೀಯ ಹೆದ್ದಾರಿ 48 ಹಾದು ಹೋಗಿರುವುದರಿಂದ ದಿನ ನಿತ್ಯ ನೂರಾರು ಅಪಘಾತಗಳು ಸಂಭವಿಸುತ್ತಿರುವುದರಿಂದ ಸಾಕಷ್ಟು ಸಾವು ನೋವುಗಳುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಸಾವು ನೋವುಗಳನ್ನು ತಪ್ಪಿಸಲು ಪಟ್ಟಣದಲ್ಲಿರುವ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿ ಅತ್ಯವಶ್ಯಕವಾಗಿ ಬೇಕಾಗಿರುವ ಉಪಕರಣಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಇ) ನೆಲಮಂಗಲ ಮತಕ್ಷೇತ್ರಕ್ಕೆ ಸೇರಿದ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿ, ಸೋಲೂರು ಗ್ರಾಮದ ಮುಖಾಂತರ ರಾಷ್ಟ್ರೀಯ ಹೆದ್ದಾರಿ–48 ಹಾದು ಹೋಗಿರುವುದರಿಂದ ದಿನನಿತ್ಯ ಅಪಘಾತ ಸಂಭವಿಸುವುದರಿಂದ' ಸರಿಯಾದ ಚಿಕಿತ್ಸೆ ದೊರೆಯದೇ ಬಹಳಷ್ಟು ಸಾವು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಸೋಲೂರು ಗ್ರಾಮದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ

ಆ) ಈಗಾಗಲೇ ನೆಲಮಂಗಲ ತಾಲ್ಲೂಕು ಆಸ್ಪತ್ರೆಯನ್ನು 100 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಹಾಗೂ ಟ್ರಾಮಾ ಕೇರ್ ಸೆಂಟರ್ ಎಂದು 12ನೇ ಹಣಕಾಸು ಯೋಜನೆಯಡಿ ಗುರುತಿಸಲಾಗಿದ್ದು, ಅವಶ್ಯಕ ಉಪಕರಣಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗುತ್ತಿದೆ